ಸಾಕ್ಷಿಯನ್ನು ದಿಃ 07-04-2018 ರಂದು ಪುನಃಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಂ ಆರ್ ವಕೀಲರಿಂದಃ

ದಿಃ 06-07-2014 ರಂದು ತಿಲಕನಗರ ಪೋ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸದರಿ ಹೇಳಿಕೆಯಲ್ಲಿರುವ ಖಂಡಿಕೆ 2 ರಲ್ಲಿ ರುವ ಸಂಗತಿಯನ್ನು ಸಾಕ್ಷಿಗೆ ಓದಿ ತಿಳಿಸಲಾಗಿ ಆ ರೀತಿ ಹೇಳಿಕೆ ನೀಡಿದ್ದಾಗಿ ಹೇಳಿದ್ದಾರೆ. ಸದರಿ ದಾಖಲೆಯನ್ನು ನಿಡಿ 1 ಅಂತ ಗುರುತಿಸಲಾಯಿತು. ಮದುವೆ ಮಾತುಕತೆಯಲ್ಲಿ ನಾನು ಮತ್ತು 1 ನೇ ಆರೋಪಿ, ನನ್ನ ಮತ್ತು ಆತನ ಸಂಬಂಧಿಕರು ಇದ್ದರು. ನಿಶ್ಚಿತಾರ್ಥ ಆ ದಿನ ಮದ್ಯಾಹ್ನ ಆಗಿದೆ. ಸಮಯ ನೆನಪಿಲ್ಲ. ದಿಃ 13-03-2013 ರಂದು 1ನೇ ಆರೋಪಿ ಆಲ್ಮಾಸ್ ಎಜುಕೇಷನ್ ಟ್ರಸ್ಟ್ ನಲ್ಲಿ ಬೆಳಿಗ್ಗೆ ಮತ್ತು ಮದ್ಯಾಹ್ನ ಕೆಲಸ ನಿರ್ವಹಿಸಿದ್ದಾನೆ ಎಂದರೆ ಸರಿಯಲ್ಲ. ದಿಃ 13-03-2013 ರಂದು ನಾನು ನ್ಯೂ ಬಾಲಾಜಿ ವಿಕ್ರಮ್ ಹೈಸ್ಕೂಲ್ ನಲ್ಲಿ ಬೆಳಿಗ್ಗೆ ಮತ್ತು ಮದ್ಯಾಹ್ನ ಕೆಲಸ ನಿರ್ವಹಿಸಿದ್ದೇನೆ ಎನ್ನುವ ಹಾಜರಾತಿಯ ಪ್ರತಿಯನ್ನು ಸಾಕ್ಷಿಗೆ ತೋರಿಸಿದಾಗ ಹೌದು ಅಂತ ಒಪ್ಪಿಕೊಂಡಿದ್ದಾರೆ. ಅದನ್ನು ನಿಡಿ 2 ಅಂತ ಗುರುತಿಸಲಾಯಿತು. ನನ್ನ ನಿಶ್ಚಿತಾರ್ಥ ದಿನಾಂಕ 07-04-2013 ರಂದು ಆಗಿದೆ ಎಂದರೆ ಸರಿ. ಆ ದಿನ ನಮ್ಮ ನಿಶ್ಚಿತಾರ್ಥದ ಛಾಯಚಿತ್ರಗಳನ್ನು ಎಂ ಜಿ ವೆಂಕಟಸ್ವಾಮಿ ತಾನೆ ಮಾಡಿದ್ದಾಗಿ 2ನೇ ಆರೋಪಿಗೆ ದಾಖಲೆ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಡಿ 3 ಅಂತ ಗುರುತಿಸಲಾಯಿತು. ದಿಃ 13-03-2013 ರಂದು ನಮ್ಮ ಮದುವೆ ಮಾತುಕತೆಯಾಗಿ ನಿಶ್ಚಿತಾರ್ಥ ಆಗಿದೆ ಎಂದರೆ ಸಾಕ್ಷಿದಾರರು ದಿನಾಂಕ ತಪ್ಪಾಗಿರಬಹುದು ಅಂತ ಹೇಳುತ್ತಾರೆ. ದಿಃ 24-06-2014 ರಂದು 1 ನೇ ಆರೋಪಿ ನನ್ನ ವಿರುದ್ದ ದೂರು ನೀಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ತಾನು ದೂರು ನೀಡಿದ್ದಾಗಿ ಹೇಳಿದ್ದಾರೆ. ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೇವೆ. ನನ್ನ ಮದುವೆ ಕಾಲಕ್ಕೆ ನಾನು ನನ್ನ ತಂದೆ ತಾಯಿ ಮಾತ್ರ ಒಟ್ಟಿಗೆ ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಸಹೋದರರು ಇದ್ದರು ಎಂದು ಹೇಳುತ್ತಾರೆ. ನನಗೆ ಮತ್ತು ನನ್ನ ತಂದೆ ತಾಯಿಗೆ ಸಂಬಂಧಪಟ್ಟಂತೆ ಸರ್ಕಾರದವರು ಒಂದು ಬಿಬಿಎಂಪಿ ಕಾರ್ಡ್ ಕೊಟ್ಟಿದ್ದರು ಎಂದರೆ ಸರಿ. ನನ್ನ ತಾಯಿ ಗಾರೆಸಹಾಯಕಿ ಅಂತ ಕಾರ್ಮಿಕ ನಿರೀಕ್ಷಕರಿಂದ ಧನಸಹಾಯ ಪಡೆಯಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 03-05-2014 ರಂದು ನನ್ನ ಮತ್ತು ನನ್ನ ಗಂಡನ ಮದುವೆಯ ನೋಂದಣಿ ಆಗಿದೆ ಎಂದರೆ ಸರಿ. ಸದರಿ ನೋಂದಣಿ ವಿವಾಹದ ದಾಖಲೆಯನ್ನು ನನ್ನ ತಾಯಿ ಕಾರ್ಮಿಕ ಇಲಾಖೆಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಲವಂತವಾಗಿ ವಿವಾಹ ನೋಂದಣಿ ಮಾಡಿಸಿದ್ದಾರೆ ಅಂತ 1 ನೇ ಆರೋಪಿ ದೂರು ನೀಡಿದ್ದ ಎಂದರೆ ಅದು ಸುಳ್ಳು ಅಂತ ಹೇಳುತ್ತಾರೆ. ದಿಃ 07-05-2015 ರಂದು ಉಪನೋಂದಣಿ ಅಧಿಕಾರಿಗಳು ನಮ್ಮ ವಿರುದ್ದ ಕ್ರಮ ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ತನುಜ ನನ್ನ ವಿರುದ್ದ ಕೇಸು ಹಾಕಿದ್ದಳು ಎಂದರೆ ಅದು ಸುಳ್ಳು ಕೇಸು ಅದತ ಹೇಳುತ್ತಾರೆ. 1ನೇ ಆರೋಪಿ ನನ್ನ ವಿರುದ್ದ ಮಾನಹಾನಿ ಕೇಸು ಹಾಕಿದ್ದ ಎಂದರೆ ಅದು ಸುಳ್ಳು ಕೇಸು ಅಂತ ಹೇಳುತ್ತಾರೆ.

ನಮ್ಮ ಮದುವೆ ಆಗುವ ಪೂರ್ವದಲ್ಲಿ 4 ಮತ್ತು 5 ನೇ ಆರೋಪಿತರ ಮದುವೆ ಆಗಿತ್ತು ಎಂದರೆ ಸರಿ. ಅವರು ಮದುವೆ ಆಗಿ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮದುವೆಯಕಲ್ಲಿ ಬಿಟ್ಟರೆ ನ್ಯಾಯಾಲಯದಲ್ಲೇ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ನಮ್ಮ ಮನೆಯ ಪಕ್ಕದಲ್ಲಿಯೇ ಮನೆ ಮಾಡಿಕೊಂಡಿದ್ದರು. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಒಡವೆ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಆರೋಪಿತರಿಗೆ ರೂ. 3 ಲಕ್ಷ ಹಣ ಕೊಟ್ಟಿದ್ದೇವೆ ಆದರೆ ದಾಖಲೆ ಇಲ್ಲ. ನುಮ್ಮ ಬಳಿ

ಹಣ ಇರಲಿಲ್ಲ ಆದರೂ ಸಹಿತ ಹಣ ಕೊಟ್ಟಿದ್ದೇವೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ತುಂಬ ಬಡವರು ಆರೋಪಿತರೆ ಖರ್ಚು ಮಾಡಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮದುವೆಗೆ ರೂ. 15 ಲಕ್ಷ ಹಣ ಖರ್ಚಾದ ಬಗ್ಗೆ ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ಮತ್ತು ಸಹೋದರನಿಗೆ ಮಾಸಿಕವಾಗಿ ನಿರ್ದಿಷ್ಟ ಸಂಬಳ ಇಲ್ಲ ಎಂದರೆ ಸಾಕ್ಷಿಯು ಕೂಲಿ ಮಾಡುತ್ತಾರೆ ಎಂದು ಹೇಳುತ್ತಾರೆ. ಕೂಲಿ ಮಾಡಿದ ಹಣದಲ್ಲಿ ಕೇವಲ ಊಟ ಬಟ್ಟೆಗೆ ಮಾತ್ರ ಸಾಕಾಗುತ್ತಿತ್ತು ಯಾವುದೇ ಉಳಿತಾಯ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯ ದೇಹದ ಮೇಲೆ ಮತ್ತು ಮರ್ಮಾಂಗಕ್ಕೆ ಹಲ್ಲೆ ಮಾಡಿದ್ದೇನೆ ಅಂತ ಆತ ನನ್ನ ವಿರುದ್ದ ದೂರು ಸಲ್ಲಿಸಿದ್ದಾನೆ ಅದರಲ್ಲಿ ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂದರೆ ಸಾಕ್ಷಿಯು ಅದು ಸುಳ್ಳು ಅಂತ ಹೇಳುತ್ತಾರೆ. ದಿಃ 20-06-2014 ರಂದು ನನ್ನ ತಂದೆ ತಾಯಿ ಮತ್ತು ಆರೋಪಿತರ ಮದ್ಯೆ ರಾಜಿ ಪಂಚಾಯಿತಿ ಆಗಿದೆ ಎಂದರೆ ಸರಿ. ಆ ದಿನ ನಾನು ಆ ದಿನ ನನ್ನ ಗಂಡನ ಮೇಲೆ ಹಲ್ಲೆ ಮಾಡುವುದಿಲ್ಲ ಅಂತ ಬರೆದುಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಒತಾತಯಪೂರ್ವಕವಾಗಿ ಬರೆಸಿಕೊಂಡಿದ್ದಾರೆ ಆ ರೀತಿ ಬರೆದುಕೊಡದೆ ಇದ್ದರೆ ಗಂಡನ ಜೊತೆ ಬಾಳಲು ಬಿಡುವುದಿಲ್ಲ ಅಂತ ಹೇಳಿದ್ದಾರೆ. ಅದಕ್ಕೆ ನನ್ನ ತಂದರೆಯು ಸಹಿತ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ತನ್ನ ಮಗಳು ಬಾಳಲಿ ಅಂತ ಮಾಡಿದ್ದಾರೆ ಅಂತ ಹೇಳುತ್ತಾರೆ. ನಾನೇ ಸ್ವಇಚ್ಚೆಯಿಂದ ಈ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ ಮುಂದಿನ ಪಾಟೀಸವಾಲಿಗೆ ಸಮಯ ಕೋರಿದ್ದಾರೆ ಕೋರಿಕೆ ಮೇರೆಗೆ ಮುಂದೂಡಲಾಯಿತು).**

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

2ನೇ ಅ ಮು ಮ ದಂ.